ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಹೊಸ ಸಾರ್ವಜನಿಕ ಕಚೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು 01**

ಸಂಖ್ಯೆ; ಸ.ಶಿ.ಅ/ಒಒಎಸ್‌ಸಿ/ಸುತ್ತೋಲೆ/2010–11 ದಿನಾಂಕ: 11.05.2010

# ಸುತ್ತೋಲೆ

**ವಿಷಯ:** 2010–11ನೇ ಸಾಲಿಗೆ ಸಂಬಂಧಿಸಿದಂತೆ ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:** 1) ದಿನಾಂಕ 26.04.2010 ರಂದು ನಡೆದ AWPಮತ್ತು B ಸಭೆಯ ಶಿಫಾರಸ್ಸುಗಳು

2 ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಶಿಅ/ಒಒಎಸ್‌ಸಿ/ಚಿ.ಅಂ/ವಿ.ತ.ಕಾ/ಸುತ್ತೋಲೆ/09–10 ದಿನಾಂಕ: 26.03.2010.

*******

ಆರ್.ಟಿ.ಇ–2009 ಕಾಯ್ದೆಯು ದಿನಾಂಕ: 01.04.2010 ರಿಂದ ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ 2009–10 ನೇ ಸಾಲಿನ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಮಧ್ಯವರ್ತನೆಯ ಕೆಳಕಂಡ ಕಾರ್ಯತಂತ್ರಗಳು ಪ್ರಸ್ತುತ ವರ್ಷದಲ್ಲಿಯೂ (2010–11) ಮುಂದುವರೆಯುತ್ತವೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವುದು, ಸಾರ್ವತ್ರಿಕ ಅವಕಾಶ ಮತ್ತು ಧಾರಣದ ದೃಷ್ಟಿಯಿಂದ ಅಗತ್ಯವಿದೆ. ಅಲ್ಲದೆ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯನ್ನು ಈ ಬಾರಿ ಶೂನ್ಯಕ್ಕೆ ಇಳಿಸಬೇಕೆಂದು ಆರ್.ಟಿ.ಇ. ಆಶಯವಾಗಿದೆ. ಆದಕಾರಣ ಜಿಲ್ಲೆ ಮತ್ತು ತಾಲ್ಲೂಕು ಹಂತದ ಅಧಿಕಾರಿಗಳು ಈ ಗುರಿಯನ್ನು ತಲುಪಲು ಸೂಕ್ತ ವ್ಯವಸ್ಥೆಯನ್ನು ಮಾಡಲು ಸೂಚಿಸಿದೆ. ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರಗಳು ಮತ್ತು ಅವುಗಳ ಅನುಷ್ಠಾನ ಕುರಿತು ಮುಂದೆ ವಿವರಿಸಿದೆ. ಅನುಷ್ಠಾನದ ವಿವರಗಳಿಗೆ ಪರ್ಯಾಯ ಶಿಕ್ಷಣ ಕೈಪಿಡಿಯನ್ನು ಅನುಸರಿಸುವುದು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಹತ್ತಿರದ ಯಾವುದಾದರೂ ಶಾಲೆಗೆ ಮೊದಲು ದಾಖಲಿಸಿ, ನಂತರ ಕಾರ್ಯತಂತ್ರಗಳಿಗೆ ಒಳಪಡಿಸುವುದು ಕಡ್ಡಾಯವಾಗಿದೆ.

07–14 ವಯೋಮಾನದ ಒಒಎಸ್‌ಸಿ ಮಕ್ಕಳ ಕುರಿತು ಮಕ್ಕಳ ಜಾಡು ಹಿಡಿಯುವ ಕೆಲಸವನ್ನು (ಚೈಲ್ಡ್ ಟ್ರಾಕ್) ವ್ಯವಸ್ಥಿತವಾಗಿ ಮಾಡಲು ಕ್ರಮಕೈಗೊಳ್ಳುವುದು. ಚೈಲ್ಡ್ ಟ್ರಾಕ್ ನಲ್ಲಿ ಮುಖ್ಯವಾಗಿ– ಮಗುವಿನ ವಿಳಾಸ; ಜಾತಿ; ಜನ್ಮದಿನಾಂಕ; ಶಾಲೆಗೆ ಸೇರಿದ್ದರೆ ಬಿಟ್ಟ ತರಗತಿ;ಶಾಲೆಯ ಹೆಸರು; ಯಾವ ಕಾರ್ಯತಂತ್ರದ ವ್ಯಾಪ್ತಿಗೆ ತರಲಾಗಿದೆ; ಶಾಲೆಗೆ/ಒಒಎಸ್‌ಸಿ ಕಾರ್ಯತಂತ್ರಕ್ಕೆ ಸೇರಲು ಕೈಗೊಂಡ ಕ್ರಮಗಳು; ಷರಾ ಅಂಶಗಳು ಇರಬೇಕು. ಈ ವರದಿಯನ್ನು 15.07.2010 ರೊಳಗೆ ಈ ಕಚೇರಿಯ ಒಒಎಸ್‌ಸಿ ವಿಭಾಗಕ್ಕೆ ಕಳುಹಿಸುವುದು.

**2010-11 ನ ಸಾಲಿನಲ್ಲಿ ಅಳವಡಿಸಿರುವ ಒಒಎಸ್‌ಸಿ ಕಾರ್ಯತಂತ್ರಗಳು.**

1. **12 ತಿಂಗಳ ಚಿಣ್ಣರ ಅಂಗಳ ವಸತಿಯುತ ಸೇತುಬಂಧ** (12 RBC)
2. 12 ತಿಂಗಳ ಚಿಣ್ಣರ ಅಂಗಳ ವಸತಿ ರಹಿತ ಸೇತುಬಂಧ (12 NRBC)
   - ✓ **ಪೂರಕ ಶಾಲೆ**
   - ✓ **ಸಾರಿಗೆ ಸೌಲಭ್ಯ**
   - ✓ **12 ತಿಂಗಳ ವಸತಿರಹಿತ ಸೇತುಬಂಧ**
3. **6** ತಿಂಗಳ ಋತುಮಾನ ವಸತಿಯುತ ಸೇತುಬಂಧ ಕೇಂದ್ರ.(SRBC)
4. 3 ತಿಂಗಳ ಚಿಣ್ಣರ ಅಂಗಳ (RBC) – ವಿಶೇಷ ತರಬೇತಿ ಕಾರ್ಯಕ್ರಮ
5. 3 ತಿಂಗಳ ಚಿಣ್ಣರ ಅಂಗಳ (NRBC) – ವಿಶೇಷ ತರಬೇತಿ ಕಾರ್ಯಕ್ರಮ
6. **ಟೆಂಟ್ ಶಾಲೆ**
7. **ಸಂಚಾರಿ ಶಾಲೆ**
8. ವಿಶೇಷ ದಾಖಲಾತಿ ಆಂದೋಲನ.
9. ಎನ್.ಸಿ.ಎಲ್.ಪಿ
10. ಮದರಸ
11. ಗೃಹಾಧಾರಿತ ಶಿಕ್ಷಣ
12. **ಅವಿಷ್ಕೃತ ಚಟುವಟಿಕೆಯಡಿಯಲ್ಲಿ ಶಿಕ್ಷಣದಿಂದ ವಂಚಿತವಾಗಿರುವ** ನಗರ ಪ್ರದೇಶಗಳ ಮಕ್ಕಳ ಕಾರ್ಯಕ್ರಮಗಳು.

** **ಪಿ.ಎ.ಪಿ ಸಭೆಯ ನಡಾವಳಿಗಳು ಬಂದ ನಂತರ, ಏನಾದರೂ ಬದಲಾವಣೆ ಇದ್ದಲ್ಲಿ ಮುಂದೆ ತಿಳಿಸಲಾಗುವುದು.**

**12 ತಿಂಗಳ ಚಿಣ್ಣರ ಅಂಗಳ ವಸತಿಯುತ ಸೇತುಬಂಧ ಕೇಂದ್ರಗಳು : –**

ಶಾಲೆಯಿಂದ ಹೊರಗುಳಿದ ಹಿರಿಯ ವಯಸ್ಸಿನ ಮತ್ತು ಮುಖ್ಯವಾಹಿನಿಗೆ ಸೇರಲು ಹೆಚ್ಚು ಸಮಯವನ್ನು ಬೇಡುವ ಮಕ್ಕಳು ಈ ಕಾರ್ಯತಂತ್ರದ ಫಲಾನುಭವಿಗಳು. ಮಕ್ಕಳ ಪಾಠಪ್ರವಚನಗಳಿಗೆ-ಚಿಣ್ಣರ ಅಂಗಳ ಅಭ್ಯಾಸ ಪುಸ್ತಕ ಮತ್ತು ಹಿರಿಯರ ಚಿಣ್ಣರ ಅಂಗಳ ಪುಸ್ತಕಗಳನ್ನು ಬಳಸತಕ್ಕದ್ದು. ಕಾಲಾವಧಿಯು 12 ತಿಂಗಳು ಇದ್ದರೂ; ಮಗು ತನ್ನ ವಯಸ್ಸಿಗೆ ಅನುಗುಣವಾಗಿ ಕಲಿಕೆಯನ್ನುಂಟು ಮಾಡಿಕೊಂಡು ಔಪಚಾರಿಕ ತರಗತಿಗಳಿಗೆ ಸೇರಲು (Regular classes) ಶಕ್ತವಾದಲ್ಲಿ 12 ತಿಂಗಳಿಗೆ ಮೊದಲೇ ಅಂತಹ ಮಗುವನ್ನು ಶಾಲೆಗೆ ಸೇರಿಸಬಹುದು. ಆದರೆ 01-06-2011 ರಂದು ಈ ಕೇಂದ್ರಗಳ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವಂತೆ ವ್ಯವಸ್ಥೆಗೊಳಿಸತಕ್ಕದ್ದು. ಇಂತಹ ಕೇಂದ್ರಗಳಿಗೆ ಸ್ವಯಂಸೇವಕರ ಜೊತೆಗೆ ನುರಿತ ಅಧ್ಯಾಪಕರನ್ನು ತಪ್ಪದೆ ನಿಯೋಜಿಸುವುದು. ಅಧ್ಯಾಪಕರನ್ನು ಎನ್‌ಜಿಒಗಳು ನಡೆಸುತ್ತಿರುವ ಕೇಂದ್ರಗಳಿಗೆ ಕೂಡ ತಪ್ಪದೇ ನಿಯೋಜಿಸುವುದು.

## 12 ಆರ್.ಬಿ.ಸಿ – ಘಟಕ ವೆಚ್ಚದ ಮರು ಹಂಚಿಕೆ. (ಪ್ರತಿ ಮಗುವಿಗೆ)

| | | |
|---|---|---|
| • ಊಟಕ್ಕೆ / ಉಪಹಾರ | – | 6540 |
| • ಸ್ವಯಂ ಸೇವಕರ ಗೌರವ ಸಂಭಾವನೆ | – | 1170 |
| • ಸಹಾಯಕರ ಗೌರವ | – | 770 |
| • ಬೆಡ್ಡಿಂಗ್ | – | 300 |
| • ದೈನಂದಿನ ವಸ್ತುಗಳು | – | 400 |
| • ಕೇಂದ್ರದ ಸಾದಿಲ್ವಾರು | – | 25 |
| • ವೈದ್ಯಕೀಯ | – | 100 |
| • ತುರ್ತು ನಿಧಿ | – | 25 |
| • ಲೇಖನ ಸಾಮಗ್ರಿ (ಮಗುವಿಗೆ) | – | 170 |
| • ಗಟ್ಟಿಯಾದ ಸೂಟ್‌ಕೇಸ್/ಟ್ರಂಕ್ | – | 250 |
| • ಒಂದು ಜೊತೆ ಬಟ್ಟೆ, ಟವೆಲ್ (ಇಲಾಖೆ ನೀಡುವ ಸಮವಸ್ತ್ರದ ಜೊತೆಗೆ) | – | 250 |
| ಒಟ್ಟು | | 10000 |

(ಸ್ವಯಂ ಸೇವಕರ ಗೌರವ ಸಂಭಾವನೆ →) ಒಂದು ಕೇಂದ್ರಕ್ಕೆ ಒಬ್ಬ ಸ್ವಯಂ ಸೇವಕರ ಗರಿಷ್ಠ ಗೌರವಧನ ರೂ.ರೂ3000/– ಒಂದುತಿಂಗಳಿಗೆ

(ಸಹಾಯಕರ ಗೌರವ →) 1 ಕೇಂದ್ರಕ್ಕೆ ಸಹಾಯಕರ ಗೌರವಧನ ಗರಿಷ್ಠ ರೂ.2000/– 1 ತಿಂಗಳಿಗೆ

**ವಿಶೇಷ ಸೂಚನೆ:**

- **ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹಣ ಖರ್ಚು ಮಾಡತಕ್ಕದ್ದು. ಮಕ್ಕಳ ಸಂಖ್ಯೆಯನ್ನು ನಿಗದಿಗೊಳಿಸಿಲ್ಲ. ಪರ್ಯಾಯ ಶಿಕ್ಷಣ ಕೈಪಿಡಿಯಲ್ಲಿ ನಮೂದಿಸಿರುವ ಸಂಖ್ಯೆಯನ್ನು ಸಲಹಾತ್ಮಕ ಎಂದು ತೆಗೆದುಕೊಳ್ಳವುದು ಆದಾಗ್ಯೂ 40 ಮೀರದಿರುವುದು ಯುಕ್ತ.**
- **10 ಪ್ರತಿಶತ ಹಣಕಾಸಿನಲ್ಲಿ ಮರು ಹೊಂದಾಣಿಕೆಗೆ ಅವಕಾಶವಿದೆ.**
- **ಸುತ್ತೋಲೆ ಸಂಖ್ಯೆ: ಸಶಿಅ/ಒಓಎಸ್‌ಸಿ/ಮ.ಉ.ಯೋ/2009–10 ದಿನಾಂಕ: 13.05.2009 ರಂತೆ ಮಧ್ಯಾಹ್ನದ ಊಟವನ್ನು ಮಧ್ಯಾಹ್ನದ ಉಪಹಾರ ಯೋಜನೆಯಡಿ ಶಾಲೆಗೆ ಹೋಗುವ ಮಕ್ಕಳಿಗೆ ನೀಡಲಾಗುವುದು. 12 ಆರ್.ಬಿ,.ಸಿ ಕೇಂದ್ರದ ಅಧ್ಯಾಪಕರು ತಿಂಗಳ ಬೇಡಿಕೆಯನ್ನು ಎ.ಡಿ.ಪಿ.ಐ, ಎಂ.ಎಂ.ಎಸ್ ಇವರಿಗೆ ಪ್ರತಿ ತಿಂಗಳು ನೀಡಿ ಆಹಾರ ಧಾನ್ಯಗಳನ್ನು ಪಡೆಯುವುದು. ಸಾದಿಲ್ವಾರು ಖರ್ಚನ್ನು ಊಟಕ್ಕೆ ನೀಡಿರುವ ಹಣದಿಂದ ಭರಿಸುವುದು.**
- **ಘಟಕವೆಚ್ಚದಲ್ಲಿ ಉಳಿತಾಯವಾಗುವ ಹಣದಲ್ಲಿ ಹೆಚ್ಚು ಮಕ್ಕಳನ್ನು ಈ ಯೋಜನೆಗೆ ಒಳಪಡಿಸಬಹುದು.**
- **ಲಗತ್ತಿಕೆಯ ಮೆನು ಚಾರ್ಟನಂತೆ ಆಹಾರ ನೀಡತಕ್ಕದ್ದು.**

### 12 ತಿಂಗಳ ವಸತಿರಹಿತ ಸೇತುಬಂಧ ಕೇಂದ್ರಗಳು

ಈ ಕಾರ್ಯತಂತ್ರದ ಅಡಿಯಲ್ಲಿ 03 ಉಪಕಾರ್ಯತಂತ್ರಗಳನ್ನು ನಡೆಸಲಾಗುವುದು.

- ✓ ಪೂರಕ ಶಾಲೆಗಳು
- ✓ ಸಾರಿಗೆ ಸೌಲಭ್ಯ
- ✓ 12 ತಿಂಗಳ ವಸತಿರಹಿತ ಸೇತುಬಂಧ ಕೇಂದ್ರಗಳು.

✓ **ಪೂರಕ ಶಾಲೆಗಳು :-** ಪೂರಕ ಶಾಲೆಗಳನ್ನು ಶಾಲಾ ಸೌಲಭ್ಯ ಇಲ್ಲದ ಜನವಸತಿ ಕೇಂದ್ರಗಳಲ್ಲಿ ತೆರೆಯಬಹುದು. ಸ್ವಯಂ ಸೇವಕರ ವಿದ್ಯಾರ್ಹತೆಯು D.Ed/B.Ed ಆಗಿರಬೇಕು. ಇಲ್ಲವಾದರೆ ಅನಿವಾರ್ಯ ಸಂದರ್ಭಗಳಲ್ಲಿ ಜಿಲ್ಲೆಯ ಅಧಿಕಾರಿಗಳ ಗಮನಕ್ಕೆ ತಂದು ಇತರ ವಿದ್ಯಾರ್ಹತೆ ಉಳ್ಳವರನ್ನು ; ಆದಾಗ್ಯೂ ಕನಿಷ್ಠ ಎಸ್.ಎಸ್.ಎಲ್.ಸಿ ಆಗಿರುವವರನ್ನು ಮಾತ್ರ ತೆಗೆದುಕೊಳ್ಳಬಹುದು. ವಿವರಗಳಿಗೆ ಪರ್ಯಾಯ ಶಿಕ್ಷಣ ಕೈಪಿಡಿ ಗಮನಿಸುವುದು.

**ಘಟಕ ವೆಚ್ಚ ಮರು ಹಂಚಿಕೆ [ಪ್ರತಿ ಮಗುವಿಗೆ 10 ತಿಂಗಳಿಗೆ]**

| | | | |
|---|---|---|---|
| • ಇ.ವಿ.ಎಸ್ ಗೌರವಧನ | – | 2500 | → [10 ತಿಂಗಳ ಗರಿಷ್ಠ ಗೌರವ ಧನ 25,000/–] |
| • ಮಗುವಿಗೆ ಲೇಖನ ಸಾಮಗ್ರಿ | – | 150 | |
| • ಟಿಎಲ್‌ಎಂ/ಸಾದಿಲ್ವಾರು | – | 150 | |
| • ಶುಕ್ರವಾರ ಮತ್ತು ಸೋಮವಾರ ಸಿಹಿ ನೀಡಲು | – | 200 | |
| ಒಟ್ಟು | – | 3000 | |

✓ **ಸಾರಿಗೆ ಸೌಲಭ್ಯ**ವನ್ನು ಶಾಲಾರಹಿತ ಪ್ರದೇಶಗಳಿಂದ ಬರುವ ಒಒಎಸ್‌ಸಿ ಮಕ್ಕಳಿಗೆ ನೀಡಲು ಅವಕಾಶ ಕಲ್ಪಿಸಿದೆ. ನಿಬಂಧನೆಗಳಿಗೆ ಪರ್ಯಾಯ ಶಿಕ್ಷಣ ಕೈಪಿಡಿ ನೋಡುವುದು. ಈ ಬಾರಿ ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ಘಟಕ ವೆಚ್ಚ ರೂ 250/–ನ್ನು ನಿಗದಿಗೊಳಿಸಿದೆ. (ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೆ ವ್ಯತ್ಯಾಸವಿಲ್ಲ.)

✓ **12 ತಿಂಗಳ ವಸತಿರಹಿತ ಸೇತುಬಂಧ:** ಶಾಲೆಯಿಂದ ಹೊರಗುಳಿದ ಮಗು ವಸತಿಯುತ ಸೇತುಬಂಧ ಕೇಂದ್ರದಲ್ಲಿರಲು ಇಚ್ಚಿಸದೆ ವಸತಿರಹಿತ ಕೇಂದ್ರದಲ್ಲಿ ಇರಲು ಇಚ್ಚಿಸಿದಲ್ಲಿ ಈ ಕಾರ್ಯತಂತ್ರವನ್ನು ಅಳವಡಿಸಬಹುದು. ಘಟಕ ವೆಚ್ಚ ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ರೂ 250/– ನಿಗದಿಪಡಿಸಲಾಗಿದೆ. ಇಲ್ಲಿ ಚಿಣ್ಣರ ಅಂಗಳ ಅಭ್ಯಾಸ ಪುಸ್ತಕ ಮತ್ತು ಹಿರಿಯರ ಚಿಣ್ಣರ ಅಂಗಳ ಅಭ್ಯಾಸ ಪುಸ್ತಕಗಳನ್ನು ಬಳಸಬೇಕು. ಒಂದು ಕೇಂದ್ರದಲ್ಲಿ ಗರಿಷ್ಠ 25 ಮಕ್ಕಳು ಇರುವಂತೆ ವ್ಯವಸ್ಥೆಗೊಳಿಸಬೇಕು. ಪ್ರಸ್ತುತ ಕೇಂದ್ರಗಳಿಗೆ (ಇಲಾಖೆ / ಎನ್.ಜಿ.ಒ ನಡೆಸುವ) ತಪ್ಪದೆ ಇಲಾಖೆಯಿಂದ ಒಬ್ಬ ಅಧ್ಯಾಪಕರನ್ನು ನಿಯೋಜಿಸತಕ್ಕದ್ದು. 01.06.2011 ರಂದು ಈ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸಿ ಬಿ.ಇ.ಒ ಕಛೇರಿಗೆ ವರದಿ ಮಾಡುವುದು.

**ಹಣಕಾಸು (25 ಮಕ್ಕಳಿಗೆ)**

| | |
|---|---|
| ಊಟಕ್ಕೆ–(5 ರೂX 25 ದಿನ X 12 ತಿಂಗಳು X25 ಮಕ್ಕಳು) | 37,500 |
| ಸ್ವಯಂಸೇವಕರಿಗೆ ಗೌರವಧನ (2500 X 12 ) | 30,000 |
| ಸಾದಿಲ್ವಾರು/ ಟಿಎಲ್‌ಎಂ | 2,500 |
| ಮಕ್ಕಳಿಗೆ ಬರೆಯವ ಸಾಮಗ್ರಿ (200 X 25) | 5,000 |
| ಒಟ್ಟು | 75,.000 |

ವಿಶೇಷ ಸೂಚನೆ:

- ಒಂದು ಕೇಂದ್ರದಲ್ಲಿ 25 ಮಕ್ಕಳು ಇದ್ದಾಗ ಮೇಲಿನಂತೆ ಖರ್ಚು ಮಾಡಬಹುದು. ಮಕ್ಕಳ ಸಂಖ್ಯೆ ಕಡಿಮೆ ಇದ್ದರೆ ಸಂಬಂಧಿಸಿದ ವೆಚ್ಚವು ಸಂವಾದಿಯಾಗಿ ಕಡಿಮೆಯಾಗುತ್ತದೆ.
- ಇಂತಹ ಕೇಂದ್ರಗಳಿಗೆ ನುರಿತ ಮತ್ತು ಪ್ರಸ್ತುತ ಕೆಲಸದಲ್ಲಿ ಅನುಭವ ಇರುವ ಅಧ್ಯಾಪಕರನ್ನು ನಿಯೋಜಿಸಿ.
- ಪ್ರತಿಶತ 10 ರಷ್ಟು ಹಣ ಮರು ಹೊಂದಾಣಿಕೆ ಮಾಡಿಕೊಳ್ಳಬಹುದು.
- ಈ ಬಾರಿ 12 ಎನ್.ಆರ್.ಬಿ.ಸಿ ಕೇಂದ್ರದ ಮಕ್ಕಳಿಗೆ ಎಂ.ಎಂ.ಎಸ್ ಯೋಜನೆಯಡಿ ಆಹಾರಧಾನ್ಯಗಳನ್ನು ನೀಡಲಾಗುತ್ತದೆ. ಅಧ್ಯಾಪಕರು ಬೇಡಿಕೆಯನ್ನು ಎ.ಡಿ.ಪಿ.ಐ (ಎಂ.ಎಂ.ಎಸ್) ಇವರಿಗೆ ಸಲ್ಲಿಸಿ ಆಹಾರ ಧಾನ್ಯ ಪಡೆಯಬಹುದು. ಇಲ್ಲಿ ನೀಡುವ ಸಾದಿಲ್ವಾರು ಬಳಸಿ ಮಧ್ಯಾಹ್ನ ಆಹಾರ ತಯಾರಿಸಿ ಮಕ್ಕಳಿಗೆ ನೀಡುವುದು. ಉಳಿದ ಹಣದಿಂದ ಶಾಲೆ ಬಿಡುವಾಗ ಮೊಳಕೆ ಕಾಳು/ ಬಾಳೆಹಣ್ಣು/ ಕೋಳಿ ಮೊಟ್ಟೆ/ ಹಾಲು/ ಬ್ರೆಡ್ ನೀಡುವುದು.

**6 ತಿಂಗಳ ಋತುಮಾನ ವಸತಿಯುತ ಚಿಣ್ಣರ ಅಂಗಳ ಕೇಂದ್ರಗಳು:–**

ಇವುಗಳ ಕಾಲಾವಧಿ 06 ತಿಂಗಳು ಇರುತ್ತದೆ. ವಲಸೆ ಹೋಗುವ ಪ್ರದೇಶದಲ್ಲಿ ವಲಸಿತ ಕುಟುಂಬಗಳೊಂದಿಗೆ ಮಕ್ಕಳು ಹೋಗಿ ಅವರ ವಿದ್ಯಾಭ್ಯಾಸ ಕುಂಠಿತವಾಗಬಾರದು ಎಂದು ಇವುಗಳನ್ನು ತೆರೆಯಲಾಗುತ್ತದೆ. ಈ ಕೇಂದ್ರದ ಮಗು ಶಾಲೆಗೆ ಹಾಜರಾಗುತ್ತಿದ್ದು ತನ್ನ ಕುಟುಂಬದ ಅನುಪಸ್ಥಿತಿಯ ಸಂದರ್ಭದಲ್ಲಿ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಈ ಕೇಂದ್ರದಲ್ಲಿ ನೀಡಲಾಗುತ್ತದೆ.

ಆದಕಾರಣ ಈ ಕೇಂದ್ರಗಳನ್ನು ತೆರೆಯುವ ಬಗ್ಗೆ ಮೊದಲೇ ಜನರಿಗೆ ತಿಳುವಳಿಕೆ ಮೂಡಿಸಬೇಕು. ಹಾಗೂ ವಲಸೆ ಪ್ರಾರಂಭವಾಗುವ ಮೊದಲು (10–15 ದಿನಗಳು) ಈ ಕೇಂದ್ರಗಳು ಪ್ರಾರಂಭವಾಗುವಂತೆ ಕ್ರಮ ಮಾಡುವುದು.

**ಘಟಕ ವೆಚ್ಚದ ಮರು ಹಂಚಿಕೆ. (ಪ್ರತಿ ಮಗುವಿಗೆ)**

| | | | |
|---|---|---|---|
| • ಊಟಕ್ಕೆ / ಉಪಹಾರ | – | 3270 | |
| • ಸ್ವಯಂ ಸೇವಕರ ಗೌರವ ಸಂಭಾವನೆ | – | 585 | → 1 ಕೇಂದ್ರಕ್ಕೆ ಒಬ್ಬ ಸ್ವಯಂ ಸೇವಕರಿಗೆ ಗೌರವಧನ ಗರಿಷ್ಠ 3000 ಒಂದು ತಿಂಗಳಿಗೆ |
| • ಸಹಾಯಕರ ಗೌರವ ಸಂಭಾವನೆ | – | 395 | → 1 ಕೇಂದ್ರಕ್ಕೆ ಸಹಾಯಕರ ಗೌರವಧನ ಗರಿಷ್ಠ ರೂ.2000/– 1 ತಿಂಗಳಿಗೆ |
| • ದೈನಂದಿನ ವಸ್ತುಗಳು | – | 200 | |
| • ಕೇಂದ್ರದ ಸಾದಿಲ್ವಾರು | – | 15 | |
| • ವೈದ್ಯಕೀಯ | – | 50 | |
| • ತುರ್ತು ನಿಧಿ | – | 15 | |
| • ಮಗುವಿಗೆ ಲೇಖನ ಸಾಮಗ್ರಿ | – | 100 | ಹಿಂದಿನ ವರ್ಷ ಈ ಸೌಲಭ್ಯ ಪಡೆದ ವಿದ್ಯಾರ್ಥಿಗಳಿಗೆ ಈ ಬಾರಿ ಈ ಸೌಲಭ್ಯ ನೀಡಬಾರದು |
| • ಗಟ್ಟಿಯಾದ ಸೂಟ್‌ಕೇಸ್/ಟ್ರಂಕ್ | – | 250 | → (ಮೇಲಿನ ಟಿಪ್ಪಣಿ) |
| • ಬೆಡ್ಡಿಂಗ್ | – | 120 | |
| ಒಟ್ಟು | | 5000 | |

**ವಿಶೇಷ ಸೂಚನೆ:**

- **ಮಕ್ಕಳ ಸಂಖ್ಯೆಯನ್ನು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ನಿಗದಿಗೊಳಿಸಬಹುದು. ಹಾಗೂ ಖರ್ಚು ಮಕ್ಕಳ ಸಂಖ್ಯೆಗೆ ಅನುಗುಣವಾಗಿರತಕ್ಕದ್ದು. ಆದಾಗ್ಯೂ 40 ಮೀರದಿರುವುದು ಯುಕ್ತ. ಪ್ರತಿಶತ 10 ರಷ್ಟು ಹಣಕಾಸನ್ನು ಮರು ಹೊಂದಾಣಿಕೆ ಮಾಡಿಕೊಳ್ಳಬಹುದು.**
- **ಘಟಕ ವೆಚ್ಚದಲ್ಲಿ ಉಳಿತಾಯವಾಗುವ ಹಣದಿಂದ ಹೆಚ್ಚು ಮಕ್ಕಳನ್ನು ಅಳವಡಿಸಬಹುದು.**

**3 ತಿಂಗಳ ಚಿಣ್ಣರ ಅಂಗಳ ವಿಶೇಷ ತರಬೇತಿ ಕಾರ್ಯಕ್ರಮ: (ವಸತಿ ಸಹಿತ ಹಾಗೂ ವಸತಿ ರಹಿತ)**

ಈ ಬಾರಿಯ ಬೇಸಿಗೆಯ ಚಿಣ್ಣರ ಅಂಗಳ ಕಾರ್ಯಕ್ರಮವು ಜನವರಿ–2010 ರಲ್ಲಿ ಗುರುತಿಸಲಾಗಿರುವ ಮಕ್ಕಳ ಸಮೀಕ್ಷೆ ಆಧಾರದ ಮೇಲೆ ಕೇವಲ ಶಾಲೆಯಿಂದ ಹೊರಗುಳಿದ ಮಕ್ಕಳು ಮಾತ್ರ ಒಳಗೊಂಡಿದೆ. ಚಿಣ್ಣರ ಅಂಗಳ ಅವಧಿಯನ್ನು ಈ ಬಾರಿ 3 ತಿಂಗಳಿಗೆ ವಿಸ್ತರಿಸಲಾಗಿದ್ದು, ದಿನಾಂಕ: 16.04.10 ರಿಂದ 15.07.2010ರವರೆಗೆ ನಡೆಯುತ್ತದೆ. 3 ತಿಂಗಳ ವಸತಿ ರಹಿತ ಹಾಗೂ ವಸತಿ ಸಹಿತ ಕೇಂದ್ರಗಳನ್ನು ನಡೆಸುವ ಬಗ್ಗೆ ವಿವರಗಳು ಈ ಕಛೇರಿಯಿಂದ ಈಗಾಗಲೇ 26.03.2010 ರ ಸುತ್ತೋಲೆಯಲ್ಲಿ ನೀಡಲಾಗಿದೆ.

**ಚಿಣ್ಣರ ಅಂಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಘಟಕ ವೆಚ್ಚದ ಪರಿಷ್ಕೃತ ಮರುಹಂಚಿಕೆ ಈ ಕೆಳಕಂಡಂತಿರುತ್ತದೆ.**

| ವಿಷಯ | ಮರು ಪರಿಷ್ಕರಣೆ 2010–11 | |
|---|---|---|
| | 03 ತಿಂಗಳ ಎನ್.ಆರ್.ಬಿ.ಸಿ | 03 ತಿಂಗಳ ಆರ್.ಬಿ.ಸಿ |
| ಸ್ವಯಂಸೇವಕರಿಗೆ | 120 | 240 |
| ಊಟ / ಉಪಹಾರ | 500 | 1500 |
| ಲೇಖನ ಸಾಮಗ್ರಿ | 60 | 60 |
| ಕಲಿಕಾ ಬೋದನಾ ಸಾಮಗ್ರಿ | 60 | 60 |
| ಸಹಾಯಕ | – | 120 |
| ದೈನಂದಿನ ವಸ್ತುಗಳು | – | 90 |
| ಸಾದಿಲ್ವಾರು | 10 | 60 |
| ಬೇಸಿಗೆ ಶಿಬಿರ ಸಾಂಸ್ಕೃತಿಕ ಕಾರ್ಯಕ್ರಮ | – | 200 |
| ಪ್ರವಾಸ | – | 120 |
| ವೈದ್ಯಕೀಯ ತಪಾಸಣೆ | – | 50 |
| ಒಟ್ಟು | 750 | 2500 |

**ಟೆಂಟ್ ಶಾಲೆ:-**

✓ ವಲಸೆ ಬರುವ ಜನ ತಮ್ಮೊಂದಿಗೆ ಶಾಲೆಯಲ್ಲಿ ಕಲಿಯುತ್ತಿರುವ ಮಗುವನ್ನು ಕರೆತರುತ್ತಾರೆ. ಇದರಿಂದ ಇಂತಹ ವಿದ್ಯಾರ್ಥಿಗಳ ಕಲಿಕೆ ಮಟ್ಟದ ಮೇಲೆ ವಲಸೆ ಪ್ರತೀಕೂಲ ಪರಿಣಾಮ ಬೀರುವುದು. ಹೆಚ್ಚು ಸಂದರ್ಭಗಳಲ್ಲಿ ಶಾಲೆಯನ್ನು ಮಧ್ಯದಲ್ಲೆ ಬಿಡುವವರ ಸಂಖ್ಯೆ ಹೆಚ್ಚಳವಾಗುತ್ತದೆ.

✓ ಗುಡಾರ ಶಾಲೆಗಳನ್ನು ವಲಸಿತ ಬಿಡಾರಗಳ ಸ್ಥಳದಲ್ಲಿ ಸ್ಥಾಪಿಸಬೇಕಾಗುತ್ತದೆ. ಗುಡಾರ ಶಾಲೆಯ ಮಕ್ಕಳು ಶಾಲೆಯನ್ನು ತೊರೆದ ಮಕ್ಕಳು ಎಂದು ಪರಿಭಾವಿಸಲಾಗಿದ್ದು, ಈ ಮಕ್ಕಳು ಔಪಚಾರಿಕ ಪಠ್ಯ ಕ್ರಮವನ್ನು ಅಭ್ಯಾಸ ಮಾಡುತ್ತಾರೆ. ವಲಸೆ ಅವಧಿ ಸೀಮಿತವಾದದ್ದು ಎಂದು ಭಾವಿಸಿ ಗುಡಾರ ಶಾಲೆಗಳನ್ನು 6 ತಿಂಗಳ ವರೆಗೆ ನಡೆಸಬೇಕು ಎಂಬ ಯೋಜನೆ ಇದ್ದರೂ ಅನೇಕ ವೇಳೆ ಈ ಅವಧಿ ಹೆಚ್ಚುಕಡಿಮೆ ಆಗುವ ಸಾಧ್ಯತೆ ಇದೆ.

**ಹಣಕಾಸಿನ ವಿವರ: – ಪ್ರತಿ ಮಗುವಿಗೆ ಘಟಕವೆಚ್ಚ ರೂ. 1500/-**

| | |
|---|---|
| ಟೆಂಟ್ ನಿರ್ಮಾಣ | 600 |
| ಮಕ್ಕಳ ಲೇಖನ ಸಾಮಗ್ರಿ | 100 |
| ಸಾದಿಲ್ವಾರು | 50 |
| ಕಲಿಕೋಪಕರಣಗಳು | 60 |
| ಸ್ವಯಂ ಸೇವಕರ ಗೌರವಧನ | 240 |
| ಸ್ನಾಕ್ಸ್ | 450 |
| ಒಟ್ಟು | 1500 |

ಟೆಂಟ್ ಶಾಲೆಗಳು 6 ತಿಂಗಳಿಗಿಂತ ಹೆಚ್ಚಿನ ಅವಧಿಗೆ ನಡೆದ ಪಕ್ಷದಲ್ಲಿ ಸ್ವಯಂ ಸೇವಕರ ಗೌರವಧನ ಹಾಗೂ ಸ್ನಾಕ್ಸ್ ವೆಚ್ಚವನ್ನು ಲಭ್ಯವಿರುವ ಒಓಎಸ್‌ಸಿ ಅನುದಾನದಿಂದ ಭರಿಸಬಹುದಾಗಿದೆ ಹಾಗೂ ಹತ್ತಿರದ ಶಾಲೆಗೆ ದಾಖಲು ಮಾಡಿ ವ್ಯಾಸಂಗವನ್ನು ಟೆಂಟ್ ಶಾಲೆಯಲ್ಲಿ (ಅನಿವಾರ್ಯ ಇದ್ದರೆ ಮಾತ್ರ) ಮುಂದುವರೆಸಲು ಅವಕಾಶಕಲ್ಪಿಸಿದೆ.

**ಸಂಚಾರಿ ಶಾಲೆ:-**

ಪರ್ಯಾಯ ಶಿಕ್ಷಣ ಕೈಪಿಡಿಯ ಅಂಶಗಳು ಈ ಬಾರಿಯೂ ಪ್ರಸ್ತುತ ಇವೆ. ಹಣಕಾಸಿನ ವಿವರವನ್ನು ಈ ಸುತ್ತೋಲೆಯಲ್ಲಿ ಮತ್ತೊಮ್ಮೆ ನೀಡಲಾಗಿದೆ.

ಹಣಕಾಸಿನ ವಿವರ: –

| | |
|---|---|
| ಘಟಕ ವೆಚ್ಚ (ಒಂದು ಮಗುವಿಗೆ) | 3000 |
| ಸಾದಿಲ್ವಾರು | 200/150 HPS/LPS |
| ವೈದ್ಯಕೀಯ ವೆಚ್ಚ | 60 |
| ಕಲಿಕೋಪಕರಣ | 20 |
| ಹೊರ ಸಂಚಾರ | 200 |
| ಸ್ವಯಂ ಸೇವಕರ ಗೌರವಧನ | 200 |
| ಸಾರಿಗೆ ವೆಚ್ಚ | 2320 |
| ಒಟ್ಟು | 3000 |

**ದಾಖಲಾತಿ ಆಂದೋಲನ ಹಾಗೂ ವಿಶೇಷ ದಾಖಲಾತಿ ಆಂದೋಲನ:-**

ದಾಖಲಾತಿ ಆಂದೋಲನವನ್ನು ಶಾಲೆ ಪ್ರಾರಂಭದ ದಿನಗಳಲ್ಲಿ ತಪ್ಪದೆ ಕೈಗೊಳ್ಳುವುದು. ಈ ಕ್ರಮದ ತರುವಾಯವೂ ಮಕ್ಕಳು ದಾಖಲಾಗದಿದ್ದರೆ ವಿಶೇಷ ದಾಖಲಾತಿ ಆಂದೋಲನವನ್ನು ಜೂನ್ 30 ರಂದು ನಡೆಸುವುದು. ಅಲ್ಲದೆ ಗೈರುಹಾಜರಾಗುವ ಮಕ್ಕಳ ಮನೆಗೆ ಪ್ರತಿ ಸೋಮವಾರ ಶಾಲಾ ಅವಧಿಗೆ ಮುನ್ನ ಹೋಗಿ ಕರೆತರುವ ವ್ಯವಸ್ಥೆ ಮಾಡುವುದು. ಹಾಗೂ ಶೇಖಡ 90ಕ್ಕಿಂತ ಕಡಿಮೆ ಹಾಜರಾತಿಯುಳ್ಳ ಶಾಲೆಗಳ ಶಿಕ್ಷಕರು ಪ್ರತಿ ದಿನ ತರಗತಿಗೆ ಮುನ್ನ ಗೈರುಹಾಜರಾಗುವ ಮಗುವನ್ನೂ ಕರೆತರುವ ವ್ಯವಸ್ಥೆ ಮಾಡುವುದು. ಸಿ.ಆರ್.ಪಿ ಯವರನ್ನು ತಮ್ಮ ವಲಯದ ಹಾಜರಾತಿ ಅಧಿಕಾರಿಯಾಗಿ ನೇಮಿಸಿ ಸುತ್ತೋಲೆ ನೀಡಿರುವುದನ್ನು [ಸಂಖ್ಯೆ:ಸಶಿಅ/ಒಓಎಸ್‌ಸಿ/ಸುತ್ತೋಲೆ/2007-08 ದಿನಾಂಕ:01.01.08] ಸ್ಮರಿಸಿದೆ. ಮಕ್ಕಳನ್ನು ಶಾಲೆಗೆ ದಾಖಲೆ ಮಾಡಿ ಹಾಜರಾಗುವಂತೆ - ಶಿಕ್ಷಕರ ಮತ್ತು ಸಮುದಾಯದ ನೆರವಿನಿಂದ ಮಾಡುವ ಜವಾಬ್ದಾರಿಯು ಸಿ.ಆರ್.ಪಿ. ಮತ್ತು ಇ.ಸಿ.ಒ ಇವರಿಗೆ ಪೂರಕವಾಗಿ ಐ.ಇ.ಆರ್.ಟಿ; ಬಿ.ಜಿ.ಸಿ; ಸಿ.ಸಿ.ಒ ಗಳ ಕಾರ್ಯನಿರ್ವಹಿಸುವ ವ್ಯವಸ್ಥೆ ಕಲ್ಪಿಸತಕ್ಕದ್ದು.

## NCLP:

**ಶಾಲೆ**ಗಳನ್ನು ಕೇಂದ್ರ ಸರ್ಕಾರದ ಧನಸಹಾಯದಿಂದ ರಾಜ್ಯ ಕಾರ್ಮಿಕ ಇಲಾಖೆ ಜಿಲ್ಲಾಧಿಕಾರಿಗಳ ಮೂಲಕ ನಡೆಸುತ್ತಿದೆ. ಇವು ವಸತಿರಹಿತ 12ತಿಂಗಳ ಸೇತುಬಂಧ ಕೇಂದ್ರಗಳಾಗಿವೆ. AWP ಮತ್ತುB 2010 ರಲ್ಲಿ ಕೆಲವು ಜಿಲ್ಲೆಗಳ NCLP ಶಾಲೆಗಳನ್ನು ವಸತಿಯುತ ಕೇಂದ್ರಗಳನ್ನಾಗಿ ನಡೆಸಲು ಅನುದಾನವು ಮಂಜೂರಾಗಿರುತ್ತದೆ. ಮಂಜೂರಾತಿ ದೊರೆತಿರುವ ಜಿಲ್ಲೆಗಳವರು-ಈ ಕೇಂದ್ರಗಳಿಗೆ ಭೇಟಿ ನೀಡಿ ಅವು ವಸತಿಯುತ ಕೇಂದ್ರಗಳೇ ಎಂಬುದನ್ನು ಖಾತ್ರಿ ಮಾಡಿಕೊಂಡು ಹಾಜರಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾಧಿಕಾರಿಗಳಿಗೆ ಪ್ರತಿ ಮಗುವಿಗೆ ರೂ 3000/- ದಂತೆ ಹಣ ನೀಡುವುದು ಹಾಗೂ ಬಳಕೆ ಪ್ರಮಾಣ ಪತ್ರ ಪಡೆಯುವುದು. ಈ ಕೇಂದ್ರಗಳಲ್ಲಿ ಹಣ ಬಳಕೆಯಾಗುತ್ತಿರುವ ಕುರಿತು ಮತ್ತು ಶಿಕ್ಷಣ ನೀಡುತ್ತಿರುವ ಕ್ರಮದ ಕುರಿತು ಆಗಾಗ್ಗೆ ಭೇಟಿ ನೀಡಿ ವರದಿಯನ್ನು ಜಿಲ್ಲಾಧಿಕಾರಿಯವರಿಗೆ ನೀಡಿ ಕ್ರಮ ಕೈಗೊಳ್ಳಲು ಕೋರುವುದು. ಸರ್ವ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರು ಮತ್ತು ಕಾರ್ಮಿಕ ಇಲಾಖೆ ಆಯುಕ್ತರ ನಡುವೆ ಏರ್ಪಟ್ಟ ಒಪ್ಪಂದದ ಪ್ರತಿಯನ್ನು ಇದರೊಂದಿಗೆ ಅಡಕಗೊಳಿಸಿದೆ. ಹಣಕಾಸಿನ ಅಂಶ ಮೇಲಿನಂತೆ ಇರುತ್ತದೆ. ಒಪ್ಪಂದದ ಇತರ ಅಂಶಗಳು ಈಗಲೂ ಪ್ರಸ್ತುತವಿದ್ದು ಅನುಸರಿಸಲು ಸೂಚಿಸಲಾಗಿದೆ. ದಿನಾಂಕ: 01.06.2011 ರಂದು ಈ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸಿ ಬಿ.ಇ.ಒ ಕಛೇರಿಗೆ ವರದಿ ಮಾಡುವುದು.

ಈ ಶಾಲೆಗಳಿಗೆ ದಾಖಲಾದ ಮಕ್ಕಳ ವಿವರವನ್ನು- ಈ ಮಕ್ಕಳು ಗೈರುಹಾಜರಾದ ಶಾಲೆಗೆ ಕಳುಹಿಸಲು ಸೂಕ್ತ ಕ್ರಮವನ್ನು ಆಯಾ ಕೇಂದ್ರದ ಶಿಕ್ಷಕರು ಮತ್ತು ಜಿಲ್ಲಾ ಬಾಲಕಾರ್ಮಿಕ ಮಕ್ಕಳ ಕೋಶವು ಕ್ರಮವಹಿಸತಕ್ಕದ್ದು.

**ಮದರಸ**

ಮದರಸದಲ್ಲಿ ಕಲಿಯುತ್ತಿರುವ ಔಪಚಾರಿಕ ಶಿಕ್ಷಣ ಪಡೆಯದ 7-14 ವಯೋಮಿತಿಯ ಮಕ್ಕಳು ಶಾಲೆಯಿಂದ ಹೊರಗೆ ಉಳಿದ ಮಕ್ಕಳೆಂದು ಖಚಿತಪಟ್ಟಲ್ಲಿ ಮತ್ತು ಈ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರವು ಅನುದಾನವನ್ನು ನೀಡುತ್ತಿಲ್ಲ ಎಂದು ಖಚಿತಪಟ್ಟಲ್ಲಿ ಹಾಗೂ ಸದರಿ ಸಂಸ್ಥೆಗಳು ಔಪಚಾರಿಕ ಶಿಕ್ಷಣ ನೀಡಲು ಮುಂದೆ ಬಂದರೆ - ಇವರ ಜೊತೆ ಒಡಂಬಡಿಕೆ ಮಾಡಿಕೊಂಡು ಅನುದಾನ ನೀಡಲು ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಒ.ಒಎಸ್‌ಸಿ/ಸುತ್ತೋಲೆ/2007-08. ದಿನಾಂಕ: 16.4.07 ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಸುತ್ತೋಲೆಯಂತೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವುದು. ಅಧ್ಯಾಪಕರೊಬ್ಬರನ್ನು ತಪ್ಪದೇ ನಿಯೋಜಿಸತಕ್ಕದ್ದು.

**ಹಣಕಾಸಿನ ವಿವರ: - (50 ಮಕ್ಕಳಿಗೆ)**

| | |
|---|---|
| ಸ್ನಾಕ್ಸ್ (5 ರೂX 50 X 300 ದಿನ) | 75,000 |
| ಸ್ವಯಂಸೇವಕರಿಗೆ ಗೌರವಧನ (2500 X 2 X 10 ) (ಗರಿಷ್ಠ ಮೊತ್ತ) | 50,000 |
| ಸಾದಿಲ್ವಾರು / ಟಿ.ಎಲ್.ಎಂ | 5,000 |
| ಮಕ್ಕಳಿಗೆ ಬರೆಯವ ಸಾಮಗ್ರಿ 200 X 50 | 10,000 |
| | 1.40.000 |

**ವಿಶೇಷ ಸೂಚನೆ:**

- **ಮಧ್ಯಾಹ್ನದ ಉಪಹಾರ ಯೋಜನೆಯಡಿಯಲ್ಲಿ ಆಹಾರ ಧಾನ್ಯಗಳನ್ನು ನೀಡಲಾಗುತ್ತದೆ. ಆಹಾರ ಧಾನ್ಯದ ಬೇಡಿಕೆಯನ್ನು ಎ.ಡಿ.ಪಿ.ಐ (ಎಂ.ಎಂ.ಎಸ್) ಇವರಿಗೆ ಕೇಂದ್ರದ ಅಧ್ಯಾಪಕರು ನೀಡುವುದು. ಸಾದಿಲ್ವಾರು ಖರ್ಚಿಗೆ ಸ್ನಾಕ್ಸ್‌ಗಾಗಿ ನೀಡುವ ಹಣದಲ್ಲಿ ಖರ್ಚುಭರಿಸಿ, ಆಹಾರ ಸಿದ್ದಪಡಿಸಿ ಬಡಿಸುವುದು. ಉಳಿದ ಹಣದಿಂದ ಸಂಜೆ ಮೊಳಕೆ ಕಾಳು/ ಬಾಳೆಹಣ್ಣು/ ಕೋಳಿ ಮೊಟ್ಟೆ/ ಹಾಲು/ ಬ್ರೆಡ್ ನೀಡುವುದು.**

**ಗೃಹಾಧಾರಿತ ಶಿಕ್ಷಣ:-**

- ✓ ವಿಶೇಷ ಅಗತ್ಯವುಳ್ಳ ಶಾಲೆಗೆ ಬರಲಾಗದ ಮಕ್ಕಳನ್ನು ಶಾಲಾವಾಹಿನಿಗೆ ತರುವ ಸಲುವಾಗಿ, ರೂಪಿಸಿರುವ ಕಾರ್ಯತಂತ್ರ .
- ✓ ಈ ಕಾರ್ಯತಂತ್ರದಲ್ಲಿ ಸ್ವಯಂ ಸೇವಕರು ವಿಶೇಷ ಅಗತ್ಯವುಳ್ಳ ಮಕ್ಕಳ ಮನೆಗೆ ಹೋಗಿ ಮಗುವಿಗೆ ಸಾಧ್ಯವಾಗುವ ಶಿಕ್ಷಣ / ಜೀವನ ಕೌಶಲ್ಯ ನೀಡಿ ಮುಖ್ಯವಾಹಿನಿಗೆ ತರಲಾಗುತ್ತದೆ.
- ✓ 12 ತಿಂಗಳು ವಾರಕ್ಕೆ ಪ್ರತಿ ಮಗುವಿಗೆ 2 ದಿನ ಶಿಕ್ಷಣ ಕೊಡಬೇಕು
- ✓ ವರ್ಷದ 12 ತಿಂಗಳು ಶಿಕ್ಷಣ ಕೊಡುವ ಏರ್ಪಾಡು ಮಾಡುವುದು. ಪ್ರತಿ ಭೇಟಿಯಲ್ಲಿ ಕನಿಷ್ಠ 3 ಗಂಟೆಗಳ ಕಾಲ ಸ್ವಯಂ ಸೇವಕರು ಶಿಕ್ಷಣ ನೀಡಬೇಕು.
- ✓ 3 ಮಕ್ಕಳನ್ನು 1 ತಂಡ ಎಂದು ಪರಿಗಣಿಸುವುದು
- ✓ ಘಟಕ ವೆಚ್ಚವನ್ನು ಸಿ.ಡ್ಬ್ಲ್ಯೂ.ಎಸ್.ಎನ್. ಕಾರ್ಯತಂತ್ರದಲ್ಲಿ ನಿಗದಿಪಡಿಸಲಾಗಿರುತ್ತದೆ.

**ಅವಿಷ್ಕೃತ ಚಟುವಟಿಕೆಯಡಿಯಲ್ಲಿ ಹಮ್ಮಿಕೊಂಡಿರುವ ಶಿಕ್ಷಣದಿಂದ ವಂಚಿತವಾಗಿರುವ ನಗರ ಪ್ರದೇಶದ ಮಕ್ಕಳಿಗೆ ಕಾರ್ಯ ಯೋಜನೆಗಳು:**

1. ಸದರಿ ಸಾಲಿನಲ್ಲಿ ರಾಜ್ಯದಲ್ಲಿ ನಗರ ಪ್ರದೇಶದ (ರಾಜ್ಯದ ಎಲ್ಲಾ ತಾಲ್ಲೂಕು, ಜಿಲ್ಲೆ ಕೇಂದ್ರಗಳ ಮತ್ತು ನಗರ ಪ್ರದೇಶ ಎಂದು ಘೋಷಿಸಲ್ಪಟ್ಟ ಪ್ರದೇಶಗಳು) ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲಾಗಿದ್ದು, ಈ ಮಕ್ಕಳಿಗೆ ಪ್ರೋತ್ಸಾಹ ಧನವಾಗಿ ರೂ. 2000/- ನೀಡಡಬಹುದಾಗಿದೆ. ಪ್ರೋತ್ಸಾಹ ಧನವನ್ನು ನೀಡಲು ಮಗುವು 75% ಹಾಜರಾತಿ ಮತ್ತು B+ ಸಾಧನೆ ಕಡ್ಡಾಯವಾಗಿರುತ್ತದೆ. ಫೆಬ್ರವರಿವರೆಗೆ ಮಗು ಶಾಲೆಗೆ ಸೇರಿದ ದಿನದಿಂದ ಪ್ರತಿಶತ ಹಾಜರಾತಿಯನ್ನು ಗಣಿಕೆ ಮಾಡತಕ್ಕದ್ದು. ರೂ. 2000/- ಮೊತ್ತವನ್ನು ಮಗುವಿನ ಖಾತೆಗೆ ಫೆಬ್ರವರಿ ತಿಂಗಳಿನಲ್ಲಿ ಜಮಾ ಮಾಡುವುದು.

- 2010 – 11 ಸಾಲಿಗೆ ಯು.ಡಿ.ಸಿ ಕಾರ್ಯತಂತ್ರಗಳ ಅಡಿಯಲ್ಲಿ ಕೆಳಕಂಡ ಚಟುವಟಿಕೆಗಳಿಗೆ ಅನುಮೋದನೆ ಆಗಿರುತ್ತದೆ.
- ಬೆಂಗಳೂರು ನಗರದಲ್ಲಿ ಡಿ ಅಡಿಕ್ಸನ್ ಕ್ಯಾಂಪ್, ಟ್ರಾನ್ಸಿಟ್ ಹೋಂ ತೆರೆಯಲು 200 ಮಕ್ಕಳಿಗೆ ರೂ. 45.86 ಲಕ್ಷ ಮಂಜೂರಾಗಿರುತ್ತದೆ ಹಾಗೂ ಪ್ರೋತ್ಸಾಹ ಧನ ನೀಡಲು ರೂ. 39.39 ಲಕ್ಷ ಅನುಮೋದನೆಯಾಗಿದೆ.
- ನಗರ ಶಿಕ್ಷಣ ವಂಚಿತ ಮಕ್ಕಳಿಗೆ ಪ್ರೋತ್ಸಾಹ ಧನ ನೀಡಲು 124.75 ಲಕ್ಷ ರೂಗಳು ಅನುಮೋದನೆಯಾಗಿದೆ.
- ಹೆಣ್ಣು ಮಕ್ಕಳ ಆವಿಷ್ಕೃತ ಚಟುವಟಿಕೆಗಳಿಗೆ ರೂ. 82.5 ಲಕ್ಷ ಅನುಮೋದನೆಯಾಗಿದೆ.
- ಎಲ್ಲಾ ಸೇರಿ ಒಟ್ಟು – 292.50 ಲಕ್ಷ ರೂಗಳು ಅನುಮೋದನೆಯಾಗಿದೆ.
- ಸಂಬಂಧಿಸಿದ ಜಿಲ್ಲೆಯವರು ಕ್ರಿಯಾಯೋಜನೆಯನ್ನು ತಯಾರಿಸಿ ಸಲ್ಲಿಸಬೇಕು.
  - ✓ ಜೊತೆಗೆ ಬೀದಿ ಮಕ್ಕಳು, ಅನಾಥರು ಹಾಗೂ ಮನೆ ಬಿಟ್ಟ ಮಕ್ಕಳಿಗಾಗಿ ಈ ಕೇಂದ್ರಗಳನ್ನು ಪ್ರಾರಂಭಿಸುವುದು.
  - ✓ ಪೋಷಕರನ್ನು ಸಂಪರ್ಕಿಸಿ ಮನವೊಲಿಸಿ ಮಕ್ಕಳನ್ನು ಕೇಂದ್ರಗಳಿಗೆ ಕಳುಹಿಸುವಂತೆ ಮಾಡುವುದು.
  - ✓ ಈ ಕಾರ್ಯಕ್ರಮವು ಬೆಂಗಳೂರು ನಗರ ವ್ಯಾಪ್ತಿಯಲ್ಲಿ 2010–11 ನೇ ಸಾಲಿಗೆ ಜಾರಿಯಲ್ಲಿರುತ್ತದೆ.

2. ತಾತ್ಕಾಲಿಕ ಆಶ್ರಯ ನಿವಾಸ (Shelter homes) 50 ಮಕ್ಕಳಿಗೆ ಒಂದು ಕೇಂದ್ರದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 4 ಕೇಂದ್ರಗಳನ್ನು ತೆರೆಯುವುದು. ಕಾರ್ಯತಂತ್ರವನ್ನು ಸಮಾಜಬಾಹಿರ ಚಟುವಟಿಕೆಯಲ್ಲಿ ತೊಡಗಿದ ಅನಾಥ ಮಕ್ಕಳು/ಬೀದಿ ಮಕ್ಕಳಿಗಾಗಿ ಬೆಂಗಳೂರು ನಗರ ಜಿಲ್ಲೆಯವರು ತಯಾರಿಸಿರುವ ಯೋಜನೆಯಂತೆ ಅನುಷ್ಠಾನಗೊಳಿಸುವುದು. ಈ ಕೇಂದ್ರಗಳಲ್ಲಿ ವಸತಿ ಮತ್ತು ಸೇತುಬಂಧ ಕಾರ್ಯಕ್ರಮ ನಡೆಸುವುದು. ಈ ಕಾರ್ಯತಂತ್ರದ ಉದ್ದೇಶ ಅಬಲ ಮಕ್ಕಳು ಸಮಾಜ ಘಾತುಕ ವ್ಯಕ್ತಿಗಳ ಬಲೆಗೆ ಬೀಳದಂತೆ ತಡೆದು ಪೋಷಕರಿಗೆ ಮರಳಿ ಕಳುಹಿಸುವ ಪ್ರಯತ್ನ ಮಾಡುವುದಾಗಿದೆ.

**2010-11ನೇ ಸಾಲಿನಲ್ಲಿ ಓಓಎಸ್‌ಸಿ ಕಾರ್ಯತಂತ್ರಗಳಡಿಯಲ್ಲಿ ನಡೆಸಲು ಉದ್ದೇಶಿಸಿರುವ ಚಟುವಟಿಕೆಗಳು :**

✓ **ಶಾಲೆ ದೂರವಿರುವ ಮಕ್ಕಳಿಗೆ ಸಾರಿಗೆ ಸೌಲಭ್ಯ : –**

ಕರ್ನಾಟಕ ರಾಜ್ಯದ ಕೆಲವು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತೀರ ಕಡಿಮೆಯಾಗಿದ್ದು, ಆ ಶಾಲೆಗಳ ಮಕ್ಕಳಿಗೆ ಕಲಿಕಾ ವಾತಾವರಣ ಸಿಗದ ಕಾರಣ ಅಂತಹ ಶಾಲೆಗಳನ್ನು ಮುಚ್ಚಿ ಮಕ್ಕಳನ್ನು ಹತ್ತಿರದ ಶಾಲೆಗಳಿಗೆ ದಾಖಲಿಸುವ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಮಕ್ಕಳಿಗೆ ಶಾಲಾ ಸೌಲಭ್ಯ ಇಲ್ಲದ ಕಾರಣ ಇವರು ಶಾಲೆಯಿಂದ ಹೊರಗುಳಿಯುತ್ತಾರೆ ಎಂಬ ಕಾರಣದಿಂದ ಇವರಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. 12 ಎನ್.ಆರ್.ಬಿ.ಸಿ ಅಡಿಯಲ್ಲಿ ಬರುವ ಸಾರಿಗೆ ವೆಚ್ಚದ ಮಾದರಿಯಲ್ಲೇ ಇಲ್ಲೂ ಸಹ ಹಣ ಬಳಸಬಹುದಾಗಿದೆ.

✓ **ಮೀನಾ ತಂಡಗಳ ರಚನೆ**

2010-11ನೇ ಸಾಲಿನಲ್ಲಿ ಪಿ.ಎ.ಬಿ ಯಿಂದ ಅನುಮೋದನೆಯಾದಂತೆ 921 ಎನ್.ಪಿ.ಇ.ಜಿ.ಎಲ್. ಕ್ಲಸ್ಟರ್‌ಗಳನ್ನು ಹೊರತುಪಡಿಸಿ ಉಳಿದ ಕ್ಲಸ್ಟರ್‌ಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮೀನಾ ತಂಡಗಳನ್ನು ರಚನೆ ಮಾಡಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ. ಮೀನಾ ತಂಡಗಳು ಮಕ್ಕಳ ಹಕ್ಕುಗಳ ಕ್ಲಬ್ಬುಗಳ ಚಟುವಟಿಕೆಯನ್ನು ನಿರ್ವಹಿಸುವ ವ್ಯವಸ್ಥೆ ಮಾಡುವುದು.

**ಘಟಕ ವೆಚ್ಚ** : ರೂ. 10,000 (ಕ್ಲಸ್ಟರ್ ಒಂದಕ್ಕೆ) ಮಕ್ಕಳಿಗಾಗಿ ಚಟುವಟಿಕೆಗಳನ್ನು ನಡೆಸಲು ಹಣ ವಿನಿಯೋಗಿಸಬೇಕು.

**ತಂಡಗಳ ರಚನೆ**: ಕೇಂದ್ರ ಶಾಲೆಯಲ್ಲಿ 15 ಮಕ್ಕಳ ಒಂದು ತಂಡ ರಚಿಸುವುದು ಇದರಲ್ಲಿ 10 ಹೆಣ್ಣು ಮಕ್ಕಳು ಹಾಗೂ 5 ಗಂಡು ಮಕ್ಕಳು ಇರಬೇಕು. ಕ್ಲಸ್ಟರ್ ವ್ಯಾಪ್ತಿಯ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಯಿಂದ ಮಕ್ಕಳು ಇರುವಂತೆ ವ್ಯವಸ್ಥೆ ಮಾಡಬೇಕು. ತಂಡದ ಪ್ರೇರಕರಾಗಿ ಒಬ್ಬರು ಕ್ರಿಯಾಶೀಲಾ ಮಹಿಳಾ ಶಿಕ್ಷಕರನ್ನು ನೇಮಿಸುವುದು. ಮಹಿಳಾ ಶಿಕ್ಷಕರು ಇಲ್ಲದಿದ್ದಲ್ಲಿ ಪುರುಷ ಶಿಕ್ಷಕರನ್ನು ನೇಮಿಸಬೇಕು.

**ತಂಡದ ಚಟುವಟಿಕೆಗಳು:**

1. ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರನ್ನು ಕನಿಷ್ಠ ತಿಂಗಳಿಗೆ ಒಮ್ಮೆಯಾದರೂ ಭೇಟಿ ನೀಡಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡುವುದು.
2. ಬಾಲ್ಯ ವಿವಾಹ ನಡೆಯದಂತೆ ಜಾಗೃತಿ ಮೂಡಿಸುವುದು.
3. ಶಾಲಾ ಮಟ್ಟ/ ಕ್ಲಸ್ಟರ್ ಮಟ್ಟದಲ್ಲಿ ಮೀನಾ ಮೇಳ ನಡೆಸುವುದು.
4. ಮೀನಾ ಪಪ್ಪೇಟ್ ಪ್ರದರ್ಶನ ಏರ್ಪಡಿಸುವುದು.
5. ಬೀದಿ ನಾಟಕಗಳನ್ನು ಏರ್ಪಡಿಸುವುದರ ಮೂಲಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
6. ಮೆಹಂದಿ, ರಂಗೋಲಿ, ಸೈಕಲ್ ಓಡಿಸುವುದು ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸುವುದು.
7. ಚರ್ಚಾ ಸ್ಪರ್ಧೆ, ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ನಾಟಕ ಮತ್ತು ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ನೀಡುವುದು.
8. ಕರ ಕುಶಲ ವಸ್ತುಗಳ ತಯಾರಿಕೆ, ಮೇಣದ ಬತ್ತಿ ತಯಾರಿಕೆ, ಎಂಬ್ರಾಯಿಡರಿ ಮತ್ತು ಬೊಂಬೆ ತಯಾರಿಕೆ ಮುಂತಾದ ಚಟುವಟಿಕೆಗಳನ್ನು ನಡೆಸುವುದು. ಮಕ್ಕಳ ಹಕ್ಕುಗಳ ಕುರಿತಂತೆ ವಿಚಾರ ಸಂಕಿರಣ, ಬೀದಿ ನಾಟಕ ಮುಂತಾದ ಕಾರ್ಯಕ್ರಮ ಹಮ್ಮಿಕೊಳ್ಳುವುದು.

ವರ್ಷದಲ್ಲಿ ಕನಿಷ್ಠ 2 ಬಾರಿ ಮೇಲ್ಕಂಡ ಕಾರ್ಯಕ್ರಮಗಳನ್ನು ನಡೆಸಿ, ಕೇಂದ್ರ ಶಾಲೆಯಲ್ಲಿ ದಾಖಲೆಗಳನ್ನು ನಿರ್ವಹಿಸುವುದು. ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸಿ.ಆರ್.ಪಿ.ಯವರು ಇದರ ಜವಾಬ್ದಾರಿಯನ್ನು ನಿರ್ವಹಿಸಬೇಕು. ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸಿದ ಪ್ರಗತಿ ವರದಿಯನ್ನು ಪ್ರತಿ ತಿಂಗಳು ರಾಜ್ಯ ಕಛೇರಿಗೆ ಸಲ್ಲಿಸಬೇಕು.

**ಒಓಎಸ್‌ಸಿ ಕಾರ್ಯತಂತ್ರಗಳಲ್ಲಿ ಎನ್‌ಜಿಓಗಳ ಭಾಗವಹಿಸುವಿಕೆ:-**

2010-11 ನೇ ಸಾಲಿನಲ್ಲಿ ಒಓಎಸ್‌ಸಿ ಕಾರ್ಯತಂತ್ರಗಳಲ್ಲಿ ಮತ್ತು ಇತರ ಸರ್ವ ಶಿಕ್ಷಣ ಅಭಿಯಾನ ಮಧ್ಯವರ್ತನೆಗಳಲ್ಲಿ ಭಾಗವಹಿಸಲು ಇಚ್ಛಿಸುವ ಎನ್‌ಜಿಓಗಳು ತಮ್ಮ ಆಸಕ್ತಿಯನ್ನು ನೊಂದಾಯಿಸಿಕೊಳ್ಳಲು ದಿನಾಂಕ: 30-03-10 ರಂದು ಸುತ್ತೋಲೆಯಲ್ಲಿ ನೀಡಲಾಗಿದೆ. ಇಲ್ಲಿನ ಅಂಶಗಳನ್ನು ಅನುಸರಿಸಿ ನಿಮ್ಮ ವ್ಯಾಪ್ತಿಯ ಒಓಎಸ್‌ಸಿ ಕಾರ್ಯತಂತ್ರಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

**ಗಮನಿಸಿ:**

- ✓ ಎನ್‌ಜಿಓಗಳ ಆಯ್ಕೆ ಪ್ರಕ್ರಿಯೆ ನಿಧಾನವಾಯಿತು ಎಂಬ ಕಾರಣ ಕೇಂದ್ರಗಳನ್ನು ಪ್ರಾರಂಭ ಮಾಡದೇ ಇರಲು ಸಕಾರಣವಲ್ಲ.
- ✓ ಇಂತಹ ವೇಳೆಯಲ್ಲಿ ಇಲಾಖೆಯೇ ಕ್ಲುಪ್ತ ಅವಧಿಯಲ್ಲಿ ಕೇಂದ್ರಗಳ ಸ್ಥಾಪನೆಗೆ ಕ್ರಮ ಮಾಡಲು ತಿಳಿಸಿದೆ.
- ✓ ವಿವರಗಳಿಗೆ ಪರ್ಯಾಯ ಶಿಕ್ಷಣ ಕೈಪಿಡಿ ನೋಡಿ. ಪಿ.ಎ.ಬಿಯಲ್ಲಿ ಅನುಮೋದಿತವಾದ (ಕೇಂದ್ರ ಕಛೇರಿ ಅನುಮತಿ ನೀಡಿದ ಎನ್.ಜಿ.ಓ ಪ್ರಕರಣಗಳು ಸೇರಿದಂತೆ) ಅಥವಾ

ಅನುಮತಿಸಲ್ಪಟ್ಟ ದಿನಾಂಕದಿಂದ 10 ದಿನಗಳೊಳಗೆ ಎಂ.ಓ.ಯು ಮಾಡಿಕೊಳ್ಳತಕ್ಕದ್ದು. ಎಂ.ಓ.ಯು ಮಾಡಿದ ತರವಾಯ 15 ದಿನಗಳೊಳಗೆ ಕೇಂದ್ರಕ್ಕೆ ಭೇಟಿ ನೀಡಿ ವಸ್ತುಸ್ಥಿತಿ ಪರಿಶೀಲಿಸಿ ಹಣ ಬಿಡುಗಡೆಗೆ ಕ್ರಮ ಮಾಡುವುದು. **ಹಣ ಬಿಡುಗಡೆಯಲ್ಲಿ ವಿಳಂಬ ನೀತಿ ಅನುಸರಿಸಿದಲ್ಲಿ ಕರ್ತವ್ಯ ಲೋಪ ಎಂದು ಪರಿಗಣಿಸಿ ಕ್ರಮ ಮಾಡಲಾಗುತ್ತದೆ. ಇದು ಎಲ್ಲಾ ಚಟುವಟಿಕೆಗಳಿಗೆ ಅನ್ವಯಿಸುತ್ತದೆ.**

2010-11ನೇ ಸಾಲಿನಲ್ಲಿ ಸಂಪೂರ್ಣ ದಾಖಲಾತಿ ಸಾಧಿಸಲು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶೂನ್ಯ ಸ್ಥಿತಿಗೆ ತರಲು ಪಿ.ಎ.ಬಿ. 2010 ವಿಧಿಸುತ್ತದೆ. ಈ ಹಿನ್ನೆಲೆಯಲ್ಲಿ ನಿಮ್ಮ ವ್ಯಾಪ್ತಿಯಲ್ಲಿ ಎಲ್ಲಾ ಮಕ್ಕಳು ದಾಖಲಾಗಿ ನಿರಂತರವಾಗಿ ಹಾಜರಾಗಿ ಗುಣಮಟ್ಟದ ಶಿಕ್ಷಣವನ್ನು ಪಡೆಯುವಲ್ಲಿ ಕ್ರಮ ಮಾಡಲು ತಿಳಿಸಿದೆ. ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಮಕ್ಕಳ ದಾಖಲಾತಿ ಬಗ್ಗೆ ವಿಶೇಷ ಗಮನ ಹರಿಸಲು ತಿಳಿಸಿದೆ.

ಮುಖ್ಯವಾಹಿನಿಗೆ ಸೇರಿದ ಶಾಲೆಯಿಂದ ಹೊರಗುಳಿದ ಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ತಿಳಿದುಕೊಳ್ಳಲು ಈಗಾಗಲೇ ಸುತ್ತೋಲೆಯಲ್ಲಿ ತಿಳಿಸಿರುವಂತೆ ದಾಖಲೆಗಳನ್ನು ನಿರ್ವಹಿಸುವುದು. ಪ್ರತಿ ತಿಂಗಳು ಲಗತ್ತಿಸಿದ ನಮೂನೆಯಂತೆ ಮಾಹಿತಿ ಕಳುಹಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಕ್ರಮಕ್ಕಾಗಿ

1. ರಾಜ್ಯದ ಎಲ್ಲಾ ಡಿಡಿಪಿಐ ಮತ್ತು ಡಿವೈಪಿಸಿ ಯವರಿಗೆ
2. ರಾಜ್ಯದ ಎಲ್ಲಾ ಬಿ.ಇ.ಓ/ಬಿ.ಆರ್.ಸಿ ಯವರಿಗೆ

ಮಾಹಿತಿಗೆ ಮತ್ತು ಕ್ರಮಕ್ಕಾಗಿ

1. ಎಸಿಪಿಐ ಧಾರವಾಡ - ಗುಲ್ಬರ್ಗಾ
2. ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಧಾರವಾಡ. ಪ್ರಾಥಮಿಕ ಶಿಕ್ಷಣ ಬೆಂಗಳೂರು-ಡಿಎಸ್ಇಆರ್‌ಟಿ ಬೆಂಗಳೂರು, ಅಲ್ಪಸಂಖ್ಯಾತ ಭಾಷೆಗಳು ಬೆಂಗಳೂರು.
3. ಸಹನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ, ಮೈಸೂರು, ಎಸಿಪಿಐ ಕಛೇರಿ ಧಾರವಾಡ/ಗುಲ್ಬರ್ಗಾ. ಪ್ರಿನ್ಸಿಪಾಲರು ಸಿಟಿಇ - ಮೈಸೂರು, ಮಂಗಳೂರು - ಚಿತ್ರದುರ್ಗ - ಗುಲ್ಬರ್ಗಾ , ಜಮಖಂಡಿ, ಬೆಳಗಾವಿ.
4. ರಾಜ್ಯದ ಎಲ್ಲಾ ಡಿಡಿಪಿಐ ಅಭಿವೃದ್ಧಿ - ಡಯಟ್ ಸಂಸ್ಥೆ.
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಯವರಿಗೆ
6. ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್.
7. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಿಗೆ.
8. ಶಿಕ್ಷಣ ವಾರ್ತೆಯ ಸಂಪಾದಕರಿಗೆ.
9. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ

ಮಾಹಿತಿಗೆ ಇವರಿಗೆ ಸಲ್ಲಿಸಿದೆ.

1. ಮಾನ್ಯ ಪ್ರಾಧಾನ ಕಾರ್ಯದರ್ಶಿಗಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

**ವಸತಿ ಸಹಿತ (ಆರ್.ಬಿ.ಸಿ) ಕೇಂದ್ರಗಳ ಸೂಚನಾ ಫಲಕದಲ್ಲಿ ಪ್ರಕಟಿಸಬೇಕಾದ ಆಹಾರದ ಸೂಚಿತ ಪಟ್ಟಿ**

| ಕ್ರಸಂ. | ವಾರ | ಬೆಳಿಗ್ಗಿನ ತಿಂಡಿ | ಮಧ್ಯಾಹ್ನದ ಊಟ | ಸಾಯಂಕಾಲದ ಲಘು ಉಪಹಾರ | ರಾತ್ರಿ ಊಟ |
|---|---|---|---|---|---|
| 1 | ಭಾನುವಾರ | ಇಡ್ಲಿ, ಸಾಂಬಾರು, ಚಟ್ನಿ ,ಹಾಲು | ಮಧ್ಯಾಹ್ನದ ಬಿಸಿ ಊಟ ಉಪಹಾರ ಯೋಜನೆ- | ಹಾಲು(ಮಾಲ್ಟ/ ಬೊರ್ನ್‌ವಿಟ) ಮತ್ತು ಮೊಳಕೆ ಒಡೆದ ಕಾಳು (ಕಡ್ಲೆ ಬೀಜ) | ಚಪಾತಿ/ಅನ್ನ, ಪಲ್ಯ, ಸಾರು,ಮಜ್ಜಿಗೆ,ಉಪ್ಪಿನಕಾಯಿ, ಸಿಹಿ. |
| 2 | ಸೋಮವಾರ | ಚಿತ್ರನ್ನ ಹಾಲು | ಮಧ್ಯಾಹ್ನದ ಬಿಸಿ ಊಟ ಉಪಹಾರ ಯೋಜನೆ- | ಹಾಲು(ಮಾಲ್ಟ/ ಬೊರ್ನ್‌ವಿಟ) ಮತ್ತು ಮೊಳಕೆ ಒಡೆದ ಕಾಳು (ಹಸಿರು ಕಾಳು) | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ ಸಿಹಿ. |
| 3 | ಮಂಗಳವಾರ | ಉಪ್ಪಿಟ್ಟು, ಹಾಲು | ಮಧ್ಯಾಹ್ನದ ಬಿಸಿ ಊಟ ಉಪಹಾರ ಯೋಜನೆ- | ಹಾಲು(ಮಾಲ್ಟ/ ಬೊರ್ನ್‌ವಿಟ) ಮತ್ತು ಅವಲಕ್ಕಿ ಚೂಡಾ | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ, ಸಿಹಿ. |
| 4 | ಬುಧವಾರ | ಅವಲಕ್ಕಿ, ಹಾಲು | ಮಧ್ಯಾಹ್ನದ ಬಿಸಿ ಊಟ ಉಪಹಾರ ಯೋಜನೆ- | ಹಾಲು(ಮಾಲ್ಟ/ ಬೊರ್ನ್‌ವಿಟ) ಮತ್ತು ಬಿಸ್ಕೇಟ್ | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ, ಸಿಹಿ. |
| 5 | ಗುರುವಾರ | ಪುಳಿಯೊಗರೆ, ಹಾಲು | ಮಧ್ಯಾಹ್ನದ ಬಿಸಿ ಊಟ ಉಪಹಾರ ಯೋಜನೆ- | ಹಾಲು(ಮಾಲ್ಟ/ ಬೊರ್ನ್‌ವಿಟ) ಮತ್ತು ಮೊಳಕೆ ಒಡೆದ ಕಾಳು (ಕಡ್ಲೆ ಬೀಜ) | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ |
| 6 | ಶುಕ್ರವಾರ | ಪೂರಿ, ಸಾಗು, ಹಾಲು | ಮಧ್ಯಾಹ್ನದ ಬಿಸಿ ಊಟ ಉಪಹಾರ ಯೋಜನೆ- | ಹಾಲು(ಮಾಲ್ಟ/ ಬೊರ್ನ್‌ವಿಟ) ಮತ್ತು ಮೊಳಕೆ ಒಡೆದ ಕಾಳು (ಹಸಿರು ಕಾಳು) | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ,ಸಿಹಿ. |
| 7 | ಶನಿವಾರ | ಶಾವಿಗೆ ಬಾತ್, ಹಾಲು | ಮಧ್ಯಾಹ್ನದ ಬಿಸಿ ಊಟ ಉಪಹಾರ ಯೋಜನೆ- | ಹಾಲು(ಮಾಲ್ಟ/ ಬೊರ್ನ್‌ವಿಟ) ಮತ್ತು ಪಕೋಡ/ಬಜ್ಜಿ | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ,ಸಿಹಿ. |

- ಭಾನುವಾರ/ ರಜೆದಿನಗಳಲ್ಲಿ ಮಧ್ಯಾಹ್ನದ ಬಿಸಿ ಊಟ ನೀಡದಿರುವ ಕಾರಣ ಮಧ್ಯಾಹ್ನದ ಊಟವನ್ನು ನೀಡಬೇಕಾಗಿದೆ. ರಾತ್ರಿಯ ಹೊತ್ತು ನೀಡುವ ಊಟದಂತೆಯೇ.
- ಆಯಾ ಋತುಮಾನದಲ್ಲಿ ಸಿಗುವ ಹಣ್ಣುಗಳನ್ನು ನೀಡಬೇಕು (ಎಲ್ಲ ತರಹದ ಹಣ್ಣುಗಳು, ವಾರಕ್ಕೆ ಮೂರು ಬಾರಿ)
- ಎಲ್ಲಾ ರೀತಿಯ ತರಕಾರಿಗಳನ್ನು ಬಳಸಬೇಕು.
- ವಾರಕ್ಕೆ ಎರಡು ಬಾರಿ ಮೊಟ್ಟೆ ನೀಡಬೇಕು.
- ಹಬ್ಬ-ಹರಿದಿನಗಳಲ್ಲೂ ವಿಶೇಷವಾಗಿ ಹಬ್ಬ ಆಚರಿಸಿ ಸ್ವೀಟ್ಸ್ ಮಾಡಬೇಕು.

## ವಸತಿ ಸಹಿತ (ಎಸ್.ಆರ್.ಬಿ.ಸಿ) ಕೇಂದ್ರಗಳ ಸೂಚನಾ ಫಲಕದಲ್ಲಿ ಪ್ರಕಟಿಸಬೇಕಾದ ಆಹಾರದ ಸೂಚಿತ ಪಟ್ಟಿ

| ಕ್ರ.ಸಂ. | ವಾರ | ಬೆಳಿಗ್ಗಿನ ತಿಂಡಿ | ಮಧ್ಯಾಹ್ನದ ಊಟ | ಸಾಯಂಕಾಲದ ಲಘು ಉಪಹಾರ | ರಾತ್ರಿ ಊಟ |
|---|---|---|---|---|---|
| 1 | ಭಾನುವಾರ | ಇಡ್ಲಿ, ಸಾಂಬಾರು, ಚಟ್ನಿ ,ಹಾಲು | ಚಪಾತಿ/ಅನ್ನ ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ, ಸಿಹಿ. | ಹಾಲು ಮತ್ತು ಮೊಳಕೆ ಒಡೆದ ಕಾಳೂ | ಅನ್ನ, ಸಾರು, ಮಜ್ಜಿಗೆ, ಸಿಹಿ |
| 2 | ಸೋಮವಾರ | ಚಿತ್ರನ್ನ ಹಾಲು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು ಹಾಗೂ ಬಜ್ಜಿ | ಅನ್ನ, ಸಾರು, ಮಜ್ಜಿಗೆ ಸಿಹಿ |
| 3 | ಮಂಗಳವಾರ | ಉಪ್ಪಿಟ್ಟು, ಹಾಲು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯೆ, ಸಾರು, ಮಜ್ಜಿಗೆ ಉಪ್ಪಿನಕಾಯಿ | ಹಾಲು ಹಾಗು ಚುರುಮರಿ | ಅನ್ನ, ಸಾರು, ಮಜ್ಜಿಗೆ, ಸಿಹಿ |
| 4 | ಬುಧವಾರ | ಅವಲಕ್ಕಿ, ಹಾಲು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯೆ, ಸಾರು, ಮಜ್ಜಿಗೆ ಉಪ್ಪಿನಕಾಯಿ | ಹಾಲು ಹಾಗು ಅವಲಕ್ಕಿ ಚೂಡಾ | ಅನ್ನ, ಸಾರು, ಮಜ್ಜಿಗೆ, ಸಿಹಿ |
| 5 | ಗುರುವಾರ | ಪುಳಿಯೊಗರೆ, ಹಾಲು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯೆ, ಸಾರು, ಮಜ್ಜಿಗೆ ಉಪ್ಪಿನಕಾಯಿ | ಹಾಲು ಮತ್ತು ಬಿಸ್ಕತ್ | ಅನ್ನ, ಸಾರು, ಮಜ್ಜಿಗೆ, ಸಿಹಿ |
| 6 | ಶುಕ್ರವಾರ | ಪೂರಿ, ಸಾಗು, ಹಾಲು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯೆ, ಸಾರು, ಮಜ್ಜಿಗೆ ಉಪ್ಪಿನಕಾಯಿ | ಹಾಲು ಮತ್ತು ನೆನೆದ ಕಡಲೆಬೀಜ (ಶೇಂಗಾ) | ಅನ್ನ, ಸಾರು, ಮಜ್ಜಿಗೆ, ಸಿಹಿ |
| 7 | ಶನಿವಾರ | ಶಾವಿಗೆ ಬಾತ್, ಹಾಲು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯೆ, ಸಾರು, ಮಜ್ಜಿಗೆ ಉಪ್ಪಿನಕಾಯಿ | ಹಾಲು ಮತ್ತು ಬಾಳೆಹಣ್ಣು | ಅನ್ನ, ಸಾರು, ಮಜ್ಜಿಗೆ, ಸಿಹಿ |

- ಭಾನುವಾರ/ ರಜೆದಿನಗಳಲ್ಲಿ ಮಧ್ಯಾಹ್ನದ ಬಿಸಿ ಊಟ ನೀಡದಿರುವ ಕಾರಣ ಮಧ್ಯಾಹ್ನದ ಊಟವನ್ನು ನೀಡಬೇಕಾಗಿದೆ. ರಾತ್ರಿಯ ಹೊತ್ತು ನೀಡುವ ಊಟದಂತೆಯೇ.
- ಆಯಾ ಋತುಮಾನದಲ್ಲಿ ಸಿಗುವ ಹಣ್ಣುಗಳನ್ನು ನೀಡಬೇಕು (ಎಲ್ಲಾ ತರಹದ ಹಣ್ಣುಗಳು, ವಾರಕ್ಕೆ ಮೂರು ಬಾರಿ)
- ಎಲ್ಲಾ ರೀತಿಯ ತರಕಾರಿಗಳನ್ನು ಬಳಸಬೇಕು.
- ವಾರಕ್ಕೆ ಎರಡು ಬಾರಿ ಮೊಟ್ಟೆ ನೀಡಬೇಕು.
- ಹಬ್ಬ-ಹರಿದಿನಗಳಲ್ಲೂ ವಿಶೇಷವಾಗಿ ಹಬ್ಬ ಆಚರಿಸಿ ಸ್ವೀಟ್ಸ್ ಮಾಡಬೇಕು.